ಸಮುದಾಯವನ್ನು ಪ್ರತಿನಿಧಿಸುವ ಮೂವರು ಸದಸ್ಯರುಗಳು ಕೇರಳ ರಾಜ್ಯದ ಟ್ರಿವೇಂಡ್ರಮ್‌ಗೆ ಆ ರಾಜ್ಯದ ಮಿನಿಸುಗಾರಿಕೆ ಮತ್ತು ಬಂದರು ಸಚಿವರುಗಳೊಡನೆ ಮತ್ತು ಬಂದರು ಇಲಾಖೆಯ ನಿರ್ದೇಶಕರೊಡನೆ ಆ ರಾಜ್ಯದ ಡ್ರೆಜರ್ ''ಮಿನಸ ಕೇರಳ'' ವನ್ನು ಹಳೆ ಮಂಗಳೂರು ಬಂದರಿನಲ್ಲಿ ಹೂಳಿತ್ತುವ ಕಾರ್ಯಕ್ಕಾಗಿ ಎರವಲು ಪಡೆಯುವ ಬಗ್ಗೆ ಚರ್ಚಿಸುವ ಸಲುವಾಗಿ ಭೇಟಿ ನೀಡಿ, ಡ್ರೆಜರ್ ''ಮಿನ ಕೇರಳ'' ಕೇರಳ ರಾಜ್ಯದಲ್ಲಿ ಹೂಳಿತ್ತುವ ಕಾರ್ಯದಲ್ಲಿ ಸಂಪೂರ್ಣವಾಗಿ ನಿರತವಾಗಿದೆಯೆಂದೂ ಅಲ್ಲದೆ ಆ ಡ್ರೆಜರ್ ಮಂಗಳೂರು ಬಂದರಿನಲ್ಲಿ ಹೂಳೆತ್ತುವ ಕೆಲಸಕ್ಕೆ ಸೂಕ್ತವಾಗಿಲ್ಲವೆಂದೂ ಅಭಿಪ್ರಾಯಪಟ್ಟರು. ಆ ಡ್ರೆಜರ್ ದೊರೆಯುವ ಮತ್ತು ಉಪಯೋಗಿಸುವ ಸಾಧ್ಯತೆ ಇಲ್ಲದಿದ್ದುದರಿಂದ ನವ ಮಂಗಳೂರು ಬಂದರಿನಲ್ಲಿ ಕೆಲಸ ಮಾಡುತ್ತಿದ್ದ ಮೆ. ಎಸ್ಸಾರ್ ಕನ್‌ಸ್ಟ್ರಕ್ಷನ್ಸ್ ಮುಂಬಯಿ ಅವರೊಂದಿಗೆ ವ್ಯವಹರಿಸಿ ಈ ಕೆಲಸವನ್ನು ರೂ. ೧೨.೦೦ ಲಕ್ಷಗಳ ವೆಚ್ಚದಲ್ಲಿ ಅವರಿಗೆ ಪಹಿಸಲು ಮಂಜೂರಾತಿ ನೀಡಲಾಯಿತು. ಮತ್ತು ಈ ಕೆಲಸವನ್ನು ಒಪ್ಪಿಸುವ ಮುನ್ನ ತಾಂತ್ರಿಕ ಉಪಸಮಿತಿಯು ಅಭಿಪ್ರಾಯವನ್ನು ಪಡೆಯಬೇಕೆಂದು ಆದೇಶಿಸಲಾಗಿತ್ತು. ತಾಂತ್ರಿಕ ಸಮಿತಿಯು ಹಾಕಿದ ಕೆಲವು ಷರತ್ತುಗಳಿಗೆಳಿಗೆ ಮೆ. ಎಸ್ಸಾರ್ ಕನ್‌ಸ್ಟ್ರಕ್ಷನ್ಸ್ ಲಿಮಿಟೆಡ್‌ನವರು ಒಪ್ಪಲಿಲ್ಲ. ಆದ್ದರಿಂದ ಇವರಿಗೆ ಈ ಕೆಲಸವನ್ನು ವಹಿಸಿರುವ ಆದೇಶವನ್ನು ಹಿಂತೆಗೆದುಕೊಳ್ಳಲಾಯಿತು. ಈ ಮಧ್ಯೆ ಮಂಗಳೂರು ಸ್ಯಾಂಡ್‌ಬ್ಯಾರ್ ಮತ್ತು ಮಿನುಗಾರಿಕಾ ವಾರ್ಫನ ಬದಿಯಲ್ಲಿ ಹೂಳಿತ್ತುವಿಕೆ ಕೆಲಸಕ್ಕಾಗಿ ಟೆಂಡರ್‌ಗಳನ್ನು ಕರೆಯಲಾಗಿ ಮೆ. ಬೋಸ್ ಡ್ರೆಜಿಂಗ್ (ಪ್ರೈ) ಲಿ. ನವರ ಒಂದು ಟೆಂಡರನ್ನು ಸ್ವೀಕರಿಸಲಾಯಿತು. ಇವರು ಸೂಚಿಸಿರುವ ಷರತ್ತುಗಳು ಸಮಂಜಸವಾಗಿರುವುದರಿಂದ ಇವರ ಟೆಂಡರನ್ನು ಸ್ವೀಕರಿಸಲು ದಿನಾಂಕ ೨೨-೬-೮೭ ರಂದು ಮಂಜೂರಾತಿ ನೀಡಲಾಗಿದೆ. ಈ ತಿಂಗಳ ಅಂತ್ಯದಲ್ಲಿ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಚಿಕ್ಕನಾಯಕನಹಳ್ಳಿಯ ವಿದ್ಯುತ್ ಇಲಾಖೆಯಲ್ಲಿ ಬೇಕಾದ ಸಾಮಗ್ರಿ ಸಲಕರಣೆಗಳಿಲ್ಲದೆ ನೀರಾವರಿ ಭಾವಿಗಳಿಗೆ ವಿದ್ಯುತ್ ಸರಬರಾಜು ಮಾಡಲು ತೊಂದರೆಯಾಗಿರುವುದು

ಶ್ರೀ ಬಿ. ಲಕ್ಕಪ್ಪ.—ಚಿಕ್ಕನಾಯಕನಹಳ್ಳಿ ವಿದ್ಯುತ್ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ ಅವರಿಗೆ ಸಿಮೆಂಟ್ ಕಂಬಗಳು, ಕಂಡಕ್ಟರ್ಸ್, ತಂತಿ, ಮೀಟರುಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳು ಸರಬರಾಜಾಗದೆ, ಕೆಲಸ ಕಾರ್ಯಗಳಿಗಾಗಿದ್ದು ಇನ್ನೂ ಇಂದಿನವರೆಗೆ ೮೦ ರೈತರ್ಯೊ ಗ್ರಾಮಗಳು ಮತ್ತು ೬೦ ಕ್ಕಿಂತ ಹೆಚ್ಚು ಮಾಜಾರೆ ಗ್ರಾಮಗಳು ನೂರಾರು ನೀರಾವರಿ ಬಾವಿಗಳಿಗೆ ವಿದ್ಯುತ್ ಸರಬರಾಜು ಮಾಡಲು ತೊಂದರೆ ಆಗಿದ್ದು. ಈ ಬಗ್ಗೆ ಈಗಾಗಲೇ ಸಂಬಂಧಪಟ್ಟ ವಿದ್ಯುತ್ ಇಲಾಖೆಯ ರಾಜ್ಯ ಸಚಿವರಿಗೆ ಮನವಿ ಸಲ್ಲಿಸಿದ್ದೇನೆ. ಆದರೂ ಇದುವರೆಗೂ ಪ್ರಯೋಜನವಾಗಿಲ್ಲ. ಈಗಲಾದರೂ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅವಶ್ಯಕತೆಯನ್ನು ಮನಗಂಡು ವಿಶೇಷ ಆದ್ಯತೆಯ ಮೇಲೆ ಮನವಿಯಲ್ಲಿ ಸಲ್ಲಿಸಿರುವ ವಿದ್ಯುತ್ ಉಪಕರಣಗಳನ್ನು ಸರಬರಾಜು ಮಾಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆಯ ರಾಜ್ಯ ಮಂತ್ರಿಗಳು).—ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿಗೆ ಕಂಬ, ವೈರು ಇತ್ಯಾದಿ ಸಾಮಾನುಗಳ ಸರಬರಾಜು ಸಾಕಷ್ಟಾಗಿದೆ. ೧-೪-೮೭ ರಿಂದ ೩೧-೮-೮೭ರ ವರೆಗೆ ಸರಬರಾಜು ಆಗಿರುವ ಸಾಮಾನುಗಳ ವಿವರ ಈ ರೀತಿ ಇದೆ. ಯಾವುದೇ ವಿಭಾಗಕ್ಕೆ ಅದಕ್ಕೆ ನಿಗದಿಪಡಿಸಿರುವ ಗುರಿಯನ್ನು ಅನುಸರಿಸಿ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುವುದು.

ಆರ್. ಸಿ. ಸಿ. ಕಂಬ	— ೨೧೯
ಪಿ. ಸಿ. ಸಿ. ಕಂಬ	— ೧೦೮೭
ಎ. ಸಿ. ಎನ್. ಆರ್. ವೈರು	— ಒಟ್ಟು ೨೫೧ ಕಿ. ಮೀಟರುಗಳು
ಟ್ರಾನ್ಸ್‌ಫಾರ್ಮರುಗಳು	— ೨೫ ಕೆ. ವಿ. ಎ. — ೩೭
	— ೮೫ ಕೆ. ವಿ. ಎ. — ೮
	— ೧೦೦ ಕೆ. ವಿ. ಎ. — ೭
	ಮೀಟರುಗಳು (ಸಿಂಗಲ್ ಫೇಸ್) — ೮೦೦

ಈ ತಾಲ್ಲೂಕಿನಲ್ಲಿ ಇದೇ ಅವಧಿಯಲ್ಲಿ ಗ್ರಾಮೀಣ ವಿದ್ಯುದ್ದೀಕರಣ ನೀರಾವರಿ ಪಂಪುಸೆಟ್ಟುಗಳಿಗೆ ಒದಗಿಸುವಲ್ಲಿನ ಪ್ರಗತಿ ಕೆಳಕಂಡಂತಿದೆ.

		ಗುರಿ	ಸಾಧನೆ
೧.	ಗ್ರಾಮಗಳ ವಿದ್ಯುದೀಕರಣ	೨೮	೧೧
೨.	ಉಪ ಗ್ರಾಮಗಳ ವಿದ್ಯುದ್ದೀಕರಣ	—	೨
೩.	ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವುದು	೯೯	೧೬೬

ಮೇಲಿನ ಅಂಕಿ ಅಂಶಗಳನ್ನು ಪರಿಶೀಲಿಸಿದಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ಗುರಿ ಮೀರಿ ಪ್ರಗತಿ ಸಾಧಿಸಲಾಗಿದೆ (೬೭ ಹೆಚ್ಚು ಪಂಪು ಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ) ಉಪ ಗ್ರಾಮಗಳ ವಿದ್ಯುದೀಕರಣಕ್ಕೆ ಗುರಿ ಹೊಂದಿಲ್ಲದಿದ್ದರೂ ೨ ಉಪ ಗ್ರಾಮಗಳ ವಿದ್ಯುದ್ದೀಕರಣವಾಗಿದೆ. ಗ್ರಾಮಗಳ ವಿದ್ಯುದ್ದೀಕರಣದಲ್ಲಿ ಕೊಂತೆ ಕಂಡುಬಂದಿದೆ. ತಾಲ್ಲೂಕಿಗೆ ಸಾಮಾನುಗಳನ್ನು ಗುರಿಗನುಗುಣವಾಗಿ ಸರಬರಾಜು ಮಾಡಲಾಗುತ್ತದೆ. ಗುರಿ ಮೀರಿ ಹೆಚ್ಚು ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಿರುವುದರಿಂದ ಈ ಬಾಬ್ತಿಗೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಸಾಮಾನುಗಳು ಉಪಯೋಗವಾಗಿ ಗ್ರಾಮೀಣ ವಿದ್ಯುದ್ದೀಕರಣಕ್ಕೆ ತೊಂದರೆಯಾಗಿದೆ. ಈ ಕ್ಷೇತ್ರದಲ್ಲಿ ಪ್ರಗತಿ ಕಾಂಕ್ಷಿತವಾಗಿದೆ.

ಮಂಡಲಗಳಿಗೆ ಈ ಕಾರ್ಯಗಳಿಗೆ ದೊರೆಯುವ ಹಣ ಮಿತವಾಗಿದ್ದು, ಇದಕ್ಕನುಗುಣವಾಗಿ ಗುರಿ ನಿಗದಿಮಾಡಿ ಸಾಮಾನುಗಳನ್ನು ಸರಬರಾಜು ಮಾಡಲಾಗುತ್ತದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ೩ -೩-೬೭ರ ವೇಳೆಗೆ ೩೬ ಗ್ರಾಮಗಳ ವಿದ್ಯುದ್ದೀಕರಣವಾಗಬೇಕಾಗಿದ್ದು. ಈ ಎಲ್ಲಾ ಗ್ರಾಮಗಳನ್ನು ಈ ಸಾಲಿನಲ್ಲಿ ವಿದ್ಯುದ್ದೀಕರಣಗೊಳಿಸಿ ಶೇಕಡ ನೂರರಷ್ಟು ರೆವಿನ್ಯೂ ಗ್ರಾಮಗಳ ವಿದ್ಯುದ್ದೀಕರಣ ಸಾಧಿಸಲಾಗುತ್ತದೆ.

ಉಪ ಗ್ರಾಮಗಳ ವಿದ್ಯುದ್ದೀಕರಣವನ್ನು ೧೯೬೮-೬೯ ರಿಂದ ತೀವ್ರಗೊಳಿಸಲಾಗುತ್ತದೆ. ಈ ತಾಲ್ಲೂಕಿಗೆ ವಾರ್ಷಿಕ ಗುರಿ ಸಾಧಿಸಲು ಬೇಕಾಗುವ ಸಾಮಾನುಗಳನ್ನು ಒದಗಿಸಲಾಗುತ್ತದೆ.

ರಾಜ್ಯದ ಶಾಲಾ ಕಾಲೇಜುಗಳಲ್ಲಿ ಶಿಕ್ಷಕ ಉಪನ್ಯಾಸಕರುಗಳ ಕೆಲಸವನ್ನು ಖಾಯಂ ಮಾಡುವುದು ಮತ್ತು ವೇತನ ಶ್ರೇಣಿಯನ್ನು ಹೆಚ್ಚಿಸುವುದು

ಶ್ರೀಮತಿ ಮನೋರಮ ಮಧ್ವರಾಜ್.—ಕಳೆದ ನಾಲ್ಕು ಶೈಕ್ಷಣಿಕ ವರ್ಷಗಳಿಂದ ರಾಜ್ಯದ ಶಾಲಾಕಾಲೇಜುಗಳಲ್ಲಿ ಶಿಕ್ಷಕ ಉಪನ್ಯಾಸಕರುಗಳಾಗಿ ಕೆಲಸ ಮಾಡುತ್ತಿದ್ದಾಗ್ಯೂ ಅವರನ್ನು ಖಾಯಂ ಮಾಡಿರುವುದಿಲ್ಲ. ಇವರನ್ನು ಆಯ್ಕೆ ಮಾಡಿದಾಗ ರೋಸ್ಟರ್ ಪದ್ಧತಿ ಅನುಸರಿಸಲಾಗಿದೆ. ರಾಜ್ಯದ ಶಾಲಾ ಕಾಲೇಜುಗಳಲ್ಲಿ ಶಿಕ್ಷಕ-ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ೧೯೬೫-೬೬ ರಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂಗೊಳಿಸಿದ ರೀತಿಯಲ್ಲಿ ಅವರನ್ನೂ ಖಾಯಂಗೊಳಿಸಬೇಕೆಂದು ಸರಕಾರವನ್ನು ಆವರು ಕೋರಿದ್ದಾಗ್ಯೂ ಈ ವರೆಗೂ ಯಾವ ಕ್ರಮವನ್ನೂ ಕೈಕೊಳ್ಳದಿರುವುದರಿಂದಲೂ, ಖಾಯಂ ಶಿಕ್ಷಕ ಉಪನ್ಯಾಸಕರಿಗೆ ಕೊಡುತ್ತಿರುವ ವೇತನ ಶ್ರೇಣಿಯನ್ನು ಇವರಿಗೆ ಕೊಡುವುದರಿಂದಲೂ ಈ ಬಗ್ಗೆ ರಾಜ್ಯದ ಗುತ್ತಿಗೆ ಶಿಕ್ಷಕ-ಉಪನ್ಯಾಸಕರ ಜಂಟಿ ಕ್ರಿಯಾ ಸಮಿತಿ ಸರಕಾರಕ್ಕೆ ಮಾನವಿ ಸಲ್ಲಿಸಿ ಮುನ್ನೆಚ್ಚರಿಕೆ ನೀಡಿರುವುದರಿಂದ ಯಾವುದೇ ರೀತಿಯ ಅಹಿತಕರ ಘಟನೆ ಸಂಭವಿಸುವ ಮೊದಲೇ ಗುತ್ತಿಗೆ ಶಿಕ್ಷಕ-ಉಪನ್ಯಾಸಕರನ್ನು ಖಾಯಂ ಮಾಡಿ ಹೊಸ ವೇತನ ಶ್ರೇಣಿಯನ್ನು ನಿಡುವ ಬಗ್ಗೆ ಸರಕಾರದವರು ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಸರಕಾರದವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ನೀಡುತ್ತೇನೆ. ಹಾಗೂ ಸದಸ್ಯರ ಕಳಕಳಿಯನ್ನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ.

ಪ್ರಾಥಮಿಕ ಶಾಲೆಗಳಿಗೆ ಹೊಸದಾಗಿ ಶಿಕ್ಷಕ ಶಿಕ್ಷಕಿಯರನ್ನು ಆಯ್ಕೆಮಾಡುವಾಗ ವಯೋಮಿತಿ ದಾಟಿದವರಿಗೆ ಆದ್ಯತೆ ನೀಡುವುದು

ಶ್ರೀ ಎನ್. ಎಚ್. ಗೌಡ.—ಅಧ್ಯಕ್ಷರೇ, ಮಾನವನ ಬದುಕಿನಲ್ಲಿ ಬಡತನವೊಂದು ಶಾಪ ಬಡತನಕ್ಕೆ ಮೂಲ ಕಾರಣ ನಿರುದ್ಯೋಗ. ಇಂದು ನಾಡಿನಲ್ಲಿ ನಿರುದ್ಯೋಗ ಸಮಸ್ಯೆ ಭೂತಕಾರವಾಗಿ ಬೆಳೆದು ತನ್ನ ನಾಲಿಗೆಯನ್ನು ಎಲ್ಲೆಲ್ಲಿಯೂ ಚಾಚಿದೆ. ಕಲಿಯದವರು ಹೇಗೋ ಹಾಗೆ ಕಲಿತ